<u>ಒ.ಎಸ್.ನಂಬ್ರ: **379/2020**</u>                    <u>ಪಿ.ಡಬ್ಲ್ಯೂ: **1**</u>

ದಿನಾಂಕ: 30-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲು: **6** ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎಮ್ ಎಸ್ ಎ ರವರಿಂದ</u>

ನಾನು ಕೂಲಿಕೆಲಸ ಮಾಡಿಕೊಂಡಿದ್ದೇನೆ. ನಾನು ಗಂಗೋಳ್ಳಿಯಲ್ಲಿ ಖಾಯಂ ವಾಸವಾಗಿದ್ದೇನೆ. ನಾನು ಹುಟ್ಟಿ ಬೆಳೆದದ್ದು ಕೋಣಿ ಗ್ರಾಮದಲ್ಲಿ. ಈಗ ನನ್ನ ಆಧಾರ ಕಾರ್ಡ ಮತ್ತು ಗುರುತಿನ ಚೀಟಿಯಲ್ಲಿ ಗಂಗೋಳ್ಳಿ ವಿಳಾಸದಲ್ಲಿರುತ್ತದೆ. **1** ಮತ್ತು **2** ನೇ ಪ್ರತಿವಾದಿ ಕೋಣಿಯಲ್ಲಿ ಖಾಯಂ ವಾಸವಾಗಿದ್ದಾರೆ. **3** ನೇ ಪ್ರತಿವಾದಿ ಮೂಡಲಕಟ್ಟೆಯಲ್ಲಿ ಖಾಯಂ ವಾಸವಾಗಿದ್ದಾರೆ. **4** ನೇ ಪ್ರತಿವಾದಿ ಬೈಂದೂರಿನಲ್ಲಿ ಖಾಯಂ ವಾಸವಾಗಿದ್ದಾರೆ. **5** ನೇ ಪ್ರತಿವಾದಿ ಚಿಕ್ಕಮಂಗಳೂರಿನ ಎನ್ ಆರ್ ಪುರ ತಾಲೂಕಿನ ಖಾಯಂ ವಾಸಿಯಾಗಿದ್ದಾರೆ.

ನನ್ನ ತಂದೆಯ ಹೆಸರು ಕುಷ್ಟ ನನ್ನ ತಾಯಿಯ ಹೆಸರು ಬುಡ್ಡು. ನನ್ನ ತಂದೆ ಮತ್ತು ತಾಯಿ ಜೀವಂತ ಇದ್ದಾಗ ಕೋಣಿಯಲ್ಲಿ ವಾಸವಾಗಿದ್ದರು. ನನ್ನ ತಂದೆ ಕುಷ್ಟರವರಿಗೆ ಅಣ್ಣ ತಮ್ಮಂದಿರು ಇದ್ದರು ಎಂದು ಹೇಳುತ್ತಿದ್ದರು, ನಾನು ನೋಡಿರುವುದಿಲ್ಲ. ಗೋಪು ಹರಿಜನ ನನ್ನ ತಂದೆ ಕುಷ್ಟರವರ ತಮ್ಮ ಎಂದು ಹೇಳುವುದನ್ನು ಕೇಳಿರುತ್ತೇನೆ, ಆದರೆ ನಾನು ನೋಡಿರುವುದಿಲ್ಲ. ಗೋಪು ಹರಿಜನರವರಿಗೆ ಹೆಂಡತಿ ಮಕ್ಕಳಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕುಷ್ಟ ಹರಿಜನ ಯಾವಾಗ ತೀರಿಕೊಂಡಿದ್ದಾರೆ ಎಂದು ನೆನಪಿಲ್ಲ. ನನ್ನ ತಂದೆ ತೀರಿಹೋದ **2-3** ವರ್ಷಗಳ ನಂತರ ನನ್ನ ತಾಯಿ ಬುಡ್ಡು ತೀರಿಕೊಂಡಿರುತ್ತಾರೆ. ನನ್ನ ತಂದೆ ಮತ್ತು ತಾಯಿ ಇಬ್ಬರು ಕೋಣಿಯಲ್ಲೆ ತೀರಿಕೊಂಡಿರುತ್ತಾರೆ.

ದಾವಾ ಸ್ವತ್ತುಗಳು ಸುಣ್ಣಾರಿ ಎಂಬಲ್ಲಿ ಇರುತ್ತದೆ. ದಾವಾ ಸ್ವತ್ತುಗಳು ಕುಷ್ಟರವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ. ದರಕಾಸ್ತು ಆದೇಶವನ್ನು ನಾನು ನೋಡಿರುವುದಿಲ್ಲ. ನಾನು ಹಾಜರುಪಡಿಸಿರುವ ದರಕಾಸ್ತು ಅದೇಶದಲ್ಲಿ ಕುಷ್ಟ ಹರಿಜನ ಅಲಿಯಾಸ ಕೃಷ್ಣ ಹರಿಜನ ಇದೆ ಎಂದರೆ ಸರಿ. ಆ ಹೆಸರಿನವರು ತುಂಬಾ ಜನರು ಇದ್ದಾರೆ ಎಂದರೆ ಸರಿ. ಸರ್ಕಾರದಿಂದ ನಾಲ್ಕುವರೆ ಎಕರೆ ಸ್ಥಳ ಕೊಟ್ಟಿರುತ್ತಾರೆ. ನಾಲ್ಕೂವರೆ ಎಕರೆ ಸ್ಥಳದ ಪೂರ್ವಕ್ಕೆ ಕೆ ಎಲ್ ಕಾರಂತರವರ ಜಾಗ, ಪಶ್ಚಿಮಕ್ಕೆ ಶೆಟ್ಟರು ಮತ್ತು ಆಚಾರವರ ಜಾಗ ಇದೆ ಅವರ ಹೆಸರು ಗೊತ್ತಿಲ್ಲ. ಉತ್ತರಕ್ಕೆ ಪಂಜುರವರ ಜಾಗ ಮತ್ತು ದಕ್ಷಿಣಕ್ಕೆ ಆಚಾರರವರ ಜಾಗ ಇರುತ್ತದೆ. ನಾಲ್ಕೂವರೆ ಎಕರೆ ಜಾಗದಲ್ಲಿ ತೆಂಗಿನ ಮರ ಮತ್ತು ಗೇರು ಗಿಡಗಳು ಇದೆ, ಅದರಲ್ಲಿ ಫಲ ಬರುತ್ತಿದೆ.

ಕುಷ್ಟ ಹರಿಜನ ಅಲಿಯಾಸ ಕೃಷ್ಣ ಹರಿಜನರವರ ತಮ್ಮ ಗೋಪು ಹರಿಜನರವರು ಕುಷ್ಟ ಹರಿಜನ ತೀರಿಕೊಂಡ ನಂತರ ತಮ್ಮ ಹೆಸರಿಗೆ ಪಹಣಿ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗೋಪು ಹರಿಜನರವರು ವಿಲುನಾಮೆ ಪ್ರಕಾರ ತಮ್ಮ ಹೆಸರಿಗೆ ಪಹಣಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 01-10-1994 ರಲ್ಲಿ ತಹಶೀಲ್ದಾರರು ಗೋಪು ಹರಿಜನರವರ ಹೆಸರಿಗೆ ಪಹಣಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ, ಗೋಪು ಹರಿಜನರವರ ಹೆಸರಿಗೆ ಪಹಣಿ ಆದಾಗ 6 ನೇ ಪ್ರತಿವಾದಿ ಆಕ್ಷೇಪಣೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆಗ ತಹಶೀಲ್ದಾರರು 6 ನೇ ಪ್ರತಿವಾದಿ ಮತ್ತು ಅವರ ತಾಯಿಯ ಹೆಸರನ್ನು ಕೂಡ ಪಹಣಿಯಲ್ಲಿ ಸೇರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ತಹಶೀಲ್ದಾರರ ಆದೇಶದ ವಿರುದ್ಧ ಸಹಾಯಕ ಕಮೀಷನರವರಿಗೆ ಮೇಲ್ಮನವಿ ಸಲ್ಲಿಸಲಾಗಿತ್ತು ಎಂದರೆ ಗೊತ್ತಿಲ್ಲ. ಸಹಾಯಕ ಕಮೀಷನರವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ.

7 ನೇ ಪ್ರತಿವಾದಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 187/2013 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ದಾವೆ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ರಾಜಿ ಡಿಕ್ರಿಯ ಪ್ರಕಾರ ದಾವಾ ಐಟಂ ಒಂದು 6 ನೇ ಪ್ರತಿವಾದಿ ಹೆಸರಿನಲ್ಲಿ ಮತ್ತು ದಾವಾ ಐಟಂ ಎರಡು 7 ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಆಗಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಸರ್ವೆ ನಂಬರ ಗೊತ್ತಿಲ್ಲ. ದಾವಾ ಸರ್ವೆ ನಂಬರ ಯಾವ ಕಾಲದಲ್ಲಿ ಮಾರ್ಪಾಡು ಆಗಿದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳ ಒತ್ತುವರಿ ಬಾಬ್ತು 2 ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಗೊತ್ತಿಲ್ಲ. ಅದರಲ್ಲಿ ಒಂದು ಕ್ರಿಮಿನಲ್ ಪ್ರಕರಣ ಮುಗಿದಿದ್ದು, ಮತ್ತೊಂದು ಬಾಕಿ ಇದೆ ಎಂದರೆ ಗೊತ್ತಿಲ್ಲ.

ನಾನು ಹೇಳುವ ಕುಷ್ಟ ಹರಿಜನ ಮತ್ತು ಮಂಜೂರಾಗಿದೆ ಎನ್ನಲಾದ ಕುಷ್ಟ ಹರಿಜನ ಬೇರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾನು ನೋಡಿರುವುದಿಲ್ಲ, ನಮ್ಮ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಗಳು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದು ದಾವಾ ಸ್ವತ್ತಿನಲ್ಲಿನ ಪಕ್ಕದವರು ನಮ್ಮ ಮೂಲಕ ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಗಳಿಂದ ಹಣ ಪಡೆಯುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಇಂದಿಗೂ ಕೂಡ ದಾವಾ ಸ್ವತ್ತುಗಳು 6 ಮತ್ತು 7 ನೇ ಪ್ರತಿವಾದಿಗಳ ಸ್ವಾಧೀನದಲ್ಲಿದ್ದು, ಅವರೇ ಕೃಷಿ ಮಾಡಿಕೊಂಡು ಅನುಭೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನಿಪಿ-6 ರ ಸಂತತಿ ನಕ್ಷೆಗೆ ಮಾಹಿತಿಯನ್ನು ನನ್ನ ತಂಗಿಯ ಮಗಳ ಗಂಡ ನೀಡಿರುತ್ತಾರೆ. ನನ್ನ ತಂಗಿಯ ಮಗಳ ಗಂಡ ನೀಡಿದ ಮಾಹಿತಿಯ ಮೇರೆಗೆ ಸಂತತಿ ನಕ್ಷೆಯನ್ನು ನೀಡಿರುತ್ತಾರೆ ಎಂದರೆ ಸರಿ.

ನಿಪಿ-6 ರಲ್ಲಿ ನಮೂದಾಗಿರುವ ಕುಷ್ಟ ಹರಿಜನ ಮತ್ತು ಬುಡ್ಡು ಹರಿಜನ ಬೇರೆ ಮತ್ತು ಈ ದಾವಾ ಸ್ವತ್ತಿಗೆ ಸಂಬಂಧಿಸಿದ ಕುಷ್ಟ ಹರಿಜನ ಬೇರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಸಲುವಾಗಿ ನಿಪಿ-6 ರ ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಈ ದಾವೆಯ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬೇರೆ ಯಾರದೋ ಪಿತೂರಿಯ ಮೇರೆಗೆ ಸುಳ್ಳು ವ್ಯಾಜ್ಯ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ